ತಾರೀಖು 3ನೆ ಏಪ್ರಿಲ್ 1907.

ನಂ. 9116—ಸ್ಯಾನಿಟರಿ (21-06)-114, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಯಾತ್ರೆ ಹೋಗುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್.	ತಾರೀಖು.		ಅಧಿಕಾರ.
				ಇಂದ.	ಗೆ.	
ಮರುಳುಸಿದ್ದೇಶ್ವರ ಸ್ವಾಮಿಯವರ ರಥೋತ್ಸವ.	ಉಜ್ಜಿನಿ ...	ಕೂಡ್ಲಿಗಿ ...	ಬಳ್ಳಾರಿ ...	8—5—07 (ಉಭಯ ದಿನಗಳೂ ಸೇರಿ)	20—5—07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಮಾರ್ಚಿ 29ನೆ ಮಳ್ಳಂ 343ನೆ ನಂಬರ್ ಮೆಮೋ ಪ್ರಕಾರ.

ತಾರೀಖು 3ನೆ ಏಪ್ರಿಲ್ 1907.

ನಂ. 9117—ಸ್ಯಾನಿಟರಿ 21-06—15, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್.	ತಾರೀಖು.		ಅಧಿಕಾರ.
				ಇಂದ.	ಗೆ.	
* ಮಾಣಿಕ್ಯವರದ ರಾಜಸ್ವಾಮಿ ಉತ್ಸವ ಮತ್ತು ದನಗಳ ಸಂತೆ.	ಪುಂಗನೂರು.	ಪುಂಗನೂರು ಸಂಸ್ಥಾನ.	ಉತ್ತರ ಆರಾಡು.	14—5—07 ಉಭಯ ದಿನಗಳೂ ಸೇರಿ.	9—6—07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಮಾರ್ಚಿ 29ನೆ ಮಳ್ಳಂ 345ನೆ ನಂಬರ್ ಮೆಮೋ ಪ್ರಕಾರ.

* 1907ನೆ ಮೇ 31ನೆ ತಾರೀಖಿನಿಂದ 1907ನೆ ಜೂನ್ 9ರ ವರೆಗೆ ದನಗಳ ಸಂತೆಯನ್ನು ನಡೆಸುವದನ್ನು ನಿಷೇಧಿಸಿದೆ.

ತಾರೀಖು 8ನೆ ಏಪ್ರಿಲ್ 1907.

ನಂ. 9118—ಸ್ಯಾನಿಟರಿ 2-06—20, ಮೈಸೂರು ಡಿಸ್ಟ್ರಿಕ್ಟ್ ಹೆಗ್ಗಡದೇವನಕೋಟೆ ತಾಲ್ಲೂಕಿನ ಬೆಳತ್ತೂರು ಗ್ರಾಮಕ್ಕೆ ಶ್ರೀ ನರಸಿಂಹಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸ್ ಎಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಏಪ್ರಿಲ್ 15ನೆ ತಾರೀಖಿನಿಂದ 22ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 16ನೆ ಮಾರ್ಚಿ 1907.

ನಂ. ಜಿ. 5651—ಜೆ. ಎಂ. 201-06—8, ಸ್ರ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನ್ಸ್‌ನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಸ್ವತ್ತು ಸರ್ಕಾರಿ ಕೆಲಸ

ಕ್ಕೆ ಎಂದರೆ, ಕೋಲಾರದಲ್ಲಿ ಬಂದು ರೆವಿನ್ಯೂ ಸಬ್ ಡಿವೀಜ್ ಆಫೀಸಿಗೆ ಸ್ಥಳವೇರ್ಪಡಿಸುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಿಗೆ ಸದರೀ ಸ್ವತ್ತನ್ನು ಹೊಂದುವುದಕ್ಕೆ ಮುಕ್ತ್ಯಾರ ಪಡೆಯಲ್ಕು ಅಧಿಕಾರ ಕೊಟ್ಟಿದೆ.

ತಿಪ್ಪಗೊಂಡನಹಳ್ಳಿ	ತಾಲ್ಲೂಕು	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಖಾತೆ ನಂಬರು.	ವಿವರಣೆ.	ಅಳತೆಗಳು. ಉದ್ದ (ಅಡಿಗಳು)	ಅಗಲ (ಅಡಿಗಳು)	ಒಟ್ಟು ಚದರ ಗಜಗಳು.	ಚತುರ್ದಿ ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
ಕೋಲಾರ	ಕೋಲಾರ	ಕೋಲಾರ	ಕೋಲಾರ	ಮಿ॥ ಹೇನಿಸ್		ನಿವೇಶನ	312	208	7210 2/3	ತಿಪ್ಪಗೊಂಡನಹಳ್ಳಿ ಅಫೀಸಿನ ಬಾಣಾರ ಮಾರ್ಗ ರಸ್ತೆ.	ಸ್ಯಾನಿಟರಿ ಬಾಳಾಜಿಗ ನಂಜಪ್ಪನ ಸರ್ವೇ ನಂಬರ 286.	ಕೋಲಾರ-ಸೋಮೇಶ್ವರಪುರದ ರಸ್ತೆ.	ಕೋಟಾರದ ಕೆರೆಯಿಂದ ನಾಲೆ.
						ಅದರ ಮಧ್ಯದಲ್ಲಿ ಪಾರಕಿಯ ಮತ್ತು ಹೆಂಚಿನ ಮೇಲ್ಚಾವಣಿಯುಳ್ಳ ಬಂಗಲೆ	56	37	230 2/9				

ತಾರೀಖು 25ನೆ ಮಾರ್ಚ 1907.

ನಂ. 8845—ಎಡ್ಯು. 336-06—2, ಮೈಸೂರಿನ ಸರ್ಕಾರಿ ಓರಿಎಂಟಲ್ ಲೈಬ್ರರಿ ಯಾ. ಪ್ರಾಚೀನ ಗ್ರಂಥಾಲಯದ ಕ್ಯೂರೇಟರ್ ಮಿ॥ ಎ. ವೆಂಕಟಸುಬ್ಬಯ್ಯಶಾಸ್ತ್ರಿ, ಬಿ. ಎ., ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ವೇರಿಗೆ 1907ನೆ ಇಸವಿಯ ಮಾರ್ಚ 11ನೆಯ ತಾರೀಖಿನಿಂದ ಬಂದು ತಿಂಗಳ ಪ್ರಿವಿಲೇಜ್ ರಜಾವನ್ನು ಕೊಟ್ಟರುತ್ತ. ಲೈಬ್ರೇರಿಯರ್ ಮಿ॥ ಆರ್. ಶಾಮಶಾಸ್ತ್ರಿ, ಬಿ. ಎ., ಯವರು, ಕ್ಯೂರೇಟರ ಚಾರ್ಜಿ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 27ನೆ ಮಾರ್ಚ 1907.

ನಂ. ಜೆ. 5936—ಜೆ. ಎಂ. 88-06—20, ಮಿ॥ ಇ. ಮುಕಾನಿಕಿ, ಐ. ಸಿ. ಎಸ್., ರವರು, 1907ನೆ ಇಸವಿಯ ಮಾರ್ಚ 13ನೆ ತಾರೀಖಿನ ಜೆ. 5601ನೆ ನಂಬರಿನ ಇಸಿ ಹಾರಿನಾಮೆಯಲ್ಲಿ (ಪ್ರಿವಿಲೇಜ್ ರಜಾವಿನ ಜತೆಗೆ) ಕೊಡಲ್ಪಟ್ಟ ವಿಶೇಷ ರಜಾವಿನವೇರಿ ಇರುವವರಿಗೆ ಅಥವಾ ಮತ್ತೊಂದು ಹುದ್ದೆ ಕೊಡುವವರೆಗೆ, ಸೂಪರಿಂಟೆಂಡಿಂಗ್ ಇಂಜನೀರ್ ಮಿ॥ ಜೆ. ಜೆ. ವೈಟ್, ಎಂ. ಐ. ಸಿ. ಇ., ಯವರು, ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರಿಟರಿಯಾಗಿ ವುಂದೂ ಬಲಿ ನೋಡುತ್ತಿರುವರು.

ತಾರೀಖು 2ನೆ ಏಪ್ರಿಲ್ 1907.

ನಂ. ಜೆ. 6014—ಜೆ. ಎಂ. 282—06—2, ಹಾಲ ಖಾಲಿ ಇರುವ ಸ್ಥಳಗಳನ್ನು ಭರ್ತಿಮಾಡುವುದಕ್ಕೋಸ್ಕರ ಈ ಕೆಳಗೆ ನಮೂದಿಸುವ ಆಫೀಸರುಗಳನ್ನು 1907ನೆ ಇಸವಿಯ ಜನವರಿ ಗುರ್ತು ತಾರೀಖು ಲಾಗಾಯಿತು ಸೀನಿಯರ್ ಅಸಿಸ್ಟೆಂಟ್ ಕಮಿಷನರುಗಳನ್ನಾಗಿ ಮೊಕರರ್ರಾಡಿ ಇದೆ:—

1. ಮಿ॥ ಸಿ. ರಾಮರಾವ್.
2. ,, ಸಿ. ಬಿ. ಕೇಶಗಿರಿರಾವ್.
3. ,, ಕೆ. ಆರ್. ಶ್ರೀನಿವಾಸಯ್ಯಂಗಾರ್.
4. ,, ಬಿ. ಜಿ. ಕುವಾರಸಾಮಿನಾಯಕ್.
5. ,, ಕೆ. ಶ್ರೀನಿವಾಸರಾವ್.

ತಾರೀಖು 9ನೆ ಮಾರ್ಚ 1907.

ನಂ. ಆರ್. 8207—ಎಲ್. ಆರ್. 470-06—3, ಸ್ರ 1894ನೆ ವರ್ಷದ 7ನೆ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಗುಂಡ್ಲುಪೇಟೆ ತಾಲ್ಲೂಕಿನ ಕೋಟೆಕೆರೆ ಗ್ರಾಮದ ದಾಖಲೆ ಬೋಗಯ್ಯನ ಹುಂಡಿ ಗ್ರಾಮದ ನಿವೇಶನದ ಬಡಾವಣೆಯ ಬಗ್ಗೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು